Karnatak Law Society's
**Vishwanathrao Deshpande Institute of Technology**
**(Approved by AICTE, New Delhi. Affiliated to VTU, Belagavi)**
**(Recognised Under Section 2(f) by UGC, New Delhi)**
**Udyog Vidya Nagar, Haliyal – 581329, Dist: Uttar Kannada (Karnataka)**
**Phone: 08284-220861, 220334, 221409, Fax: 08284-220813**
**www.klsvdit.edu.in principal@klsvdit.edu.in**

Date: 28-12-2022

**ಪತ್ರಿಕಾ ಪ್ರಕಟಣೆ:**

# ರಾಷ್ಟ್ರಮಟ್ಟದ ಜುಡೋ ಹಾಗೂ ಕುಸ್ತಿ ಪಂದ್ಯಾವಳಿಗೆ ವಿ. ಡಿ. ಐ. ಟಿ. ವಿದ್ಯಾರ್ಥಿನಿಯರು ಆಯ್ಕೆ

ಕೆ. ಎಲ್. ಎಸ್. ವಿ. ಡಿ. ಐ. ಟಿ. ಹಳಿಯಾಳದ ವಿದ್ಯಾರ್ಥಿನಿಯರಾದ ಕುಮಾರಿ. ವೀಣಾ ಸಿದ್ನಾಳ್ ಮತ್ತು ಕುಮಾರಿ. ಭುವನೇಶ್ವರಿ ಕೆ. ಎನ್ ರಾಷ್ಟ್ರಮಟ್ಟದ ಅಂತರ್ ವಿಶ್ವವಿದ್ಯಾಲಯದ ಜುಡೋ ಮತ್ತು ಕುಸ್ತಿ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ. ಮಹಾರಾಷ್ಟ್ರದ ಪುಣೆಯಲ್ಲಿರುವ ಸಾವಿತ್ರಿಬಾಯಿ ಪುಲೆ ವಿಶ್ವವಿದ್ಯಾಲಯದಲ್ಲಿ 2023ರ ಜನವರಿ 6 ರಿಂದ 9 ರ ವರೆಗೆ ಜರುಗಲಿರುವ ಕುಸ್ತಿ ಪಂದ್ಯಾವಳಿಯಲ್ಲಿ ಕುಮಾರಿ. ಭುವನೇಶ್ವರಿ ಕೆ. ಎನ್ ವಿತಾವಿ ಬೆಳಗಾವಿಯನ್ನು ಪ್ರತಿನಿಧಿಸಲಿದ್ದಾಳೆ. ಪಂಜಾಬಿನ ಪಗವಾರಾ ದಲ್ಲಿರುವ ಲವ್ಲೀ ಪ್ರೋಫೆಶನಲ್ ವಿಶ್ವವಿದ್ಯಾಲಯದಲ್ಲಿ 2023ರ ಜನವರಿ 8 ರಿಂದ 12ರ ವರೆಗೆ ಜರುಗಲಿರುವ ಜುಡೋ ಪಂದ್ಯಾವಳಿಯಲ್ಲಿ ಕುಮಾರಿ. ವೀಣಾ ಸಿದ್ನಾಳ್ ವಿತಾವಿ ಬೆಳಗಾವಿಯನ್ನು ಪ್ರತಿನಿಧಿಸಲಿದ್ದಾಳೆ.

ರಾಷ್ಟ್ರಮಟ್ಟದ ಸ್ಪರ್ಧೆಗೆ ಮಹಾವಿದ್ಯಾಲಯದ ವಿದ್ಯಾರ್ಥಿನಿಯರು ಆಯ್ಕೆಯಾಗಿರುವುದು ಸಂತಸದ ವಿಷಯ ಹಾಗೂ ಇವರ ಕಠಿಣ ಪರಿಶ್ರಮ ಶ್ಲಾಘನೀಯ ಎಂದು ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀ. ವಿನಾಯಕ ಲೋಕೂರ್ ಹೇಳಿದ್ದಾರೆ. ಸ್ಪರ್ಧೆಯಲ್ಲಿ ವಿಜಯಶಾಲಿಯಾಗಿ ಮಹಾವಿದ್ಯಾಲಯ ಹಾಗೂ ವಿಶ್ವವಿದ್ಯಾಲಯಕ್ಕೆ ಕೀರ್ತಿ ತರಲಿ ಎಂದು ಪ್ರಾಚಾರ್ಯರಾದ ಡಾ. ವಿ. ಎ. ಕುಲಕರ್ಣಿ, ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ. ಗದಿಗಪ್ಪ ಯಳ್ಳೂರ್ ಮತ್ತು ಇಲ್ಲಾ ಬೋಧಕ ಬೋಧಕೇತರ ಸಿಬ್ಬಂದಿಗಳು ಶುಭ ಹಾರೈಸಿದ್ದಾರೆ.

ಪ್ರಾಂಶುಪಾಲರು

Principal
KLS Vishwanathrao Deshpande
Institute of Technology, Haliyal



